


ಗಂಗೆಯ ತಟದಲ್ಲಿ ಬನಾರಸ್

ಜೆಟ್‌ನಿಂದ ಬಾಂಬುಗಳು ಬಿದ್ದವು. ಪತ್ರಕರ್ತರು ಟ್ರೆಂಚಿನೊಳಗೆ ಅಡಗಿಕೊಂಡರು. ಅಲುಗಾಡಲು ಆಗಲಿಲ್ಲ, ಭಯದಿಂದ. ಕೂತಲ್ಲೇ ಕೂತಿದ್ದೆ. ನಮ್ಮ ಕ್ಯಾಂಪಿಗೆ ಸಮೀಪದಲ್ಲಿ ಒಂದು ಸಣ್ಣ ಹಳ್ಳಿಯಿತ್ತು. ಅಲ್ಲಿ ಹನ್ನೊಂದು ಮನೆಗಳಿದ್ದವು. ಅವರು ಕಳ್ಳಬಟ್ಟಿ ಕಾಯಿಸುವವರು. ಅವರ ಒಲೆಯ ಬೆಂಕಿಯನ್ನು ಕಂಡು ಪಾಕಿಸ್ತಾನದ ಸೈನಿಕರು ಬಾಂಬ್ ಹಾಕಿದ್ದರು. ಇಡೀ ಹಳ್ಳಿ ಧ್ವಂಸಗೊಂಡಿತ್ತು. ಛಿದ್ರವಾದ ಶವಗಳ ಪಟ ತೆಗೆದೆ. ಅವನ್ನು ಎಲೆನ್ ಬ್ರಾಡಿ ಎಂಬ ಫೋಟೊ ಜರ್ನಲಿಸ್ಟ್‌ಗೆ ಮಾರಿಬಿಟ್ಟೆ. ಅದು ಲಂಡನಿನ 'ಸಂಡೆ ಟೈಮ್ಸ್'ನಲ್ಲಿ ಅವನ ಹೆಸರಲ್ಲಿ ಪ್ರಕಟವಾಯಿತು.

◆ **ಸುಡಾನಿನ ಬರಗಾಲದಲ್ಲಿ ತಾನು ತೆಗೆದ 'ದಿ ವಲ್ಚರ್ ಅಂಡ್ ದಿ ಲಿಟ್ಲ್ ಗರ್ಲ್' ಚಿತ್ರಪಟದಿಂದ ಖ್ಯಾತನಾದ ಕೆವಿನ್ ಕಾರ್ಟರ್ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಯುವ ಕುತೂಹಲವಿದೆ.**

ಅದೊಂದು ದಾರುಣ ಘಟನೆ. ಚಿಕ್ಕಮಗು ಹಸಿವಿನಿಂದ ಎಲುಬು ಬಿಟ್ಟುಕೊಂಡಿದೆ. ಅದು ಸಾಯುವುದನ್ನು ಕಾಯುತ್ತ ಹದ್ದು ಕುಳಿತಿದೆ. ಕಾರ್ಟರ್ ಈ ಪಟವನ್ನು ತೆಗೆದವನೇ ವಿಮಾನ ಹಿಡಿಯಲು ಓಡಿ ಹೋಗಿಬಿಟ್ಟ. ಆದರೆ ವಿಮಾನದಲ್ಲಿ ಕೂತ ಮೇಲೆ ಆತ ಒಂದೇ ಸಮ ಅಳುತ್ತಿದ್ದ. ಪಟದ ವಸ್ತು ಮನಸ್ಸನ್ನು ಕಲಕಿತ್ತು. ಅವನ ಪಟಕ್ಕೆ ಪುಲಿಟ್ಜರ್ ಪ್ರಶಸ್ತಿ ಬಂತು. ದೊಡ್ಡ ಮೊತ್ತದ ಹಣವೂ ಸಿಕ್ಕಿತು. ಆದರೆ ಮಗು ಆಳದಲ್ಲಿ ಕಾಡತೊಡಗಿತು. ವಿಮಾನ ಬಿಟ್ಟುಕೊಟ್ಟಿದ್ದರೆ ಮಗುವನ್ನು ಉಳಿಸಬಹುದಿತ್ತು ಎಂದು ಖಿನ್ನತೆಯಿಂದ ನರಳಿದ. ತನ್ನ ಅಪರಾಧವನ್ನು ಮರೆಯಲು ಮಾದಕ ವ್ಯಸನಿಯಾದ. ಕೊನೆಗೆ ಆತ್ಮಹತ್ಯೆ ಮಾಡಿಕೊಂಡ.

◆ **ನಿಮ್ಮ ಜೀವನದಲ್ಲಿ ಹೀಗೆ ಕಾಡುವ ಘಟನೆ ನಡೆದಿವೆಯಾ?**

ಢಾಕಾದ ಘಟನೆ ನೆನಪಾಗುತ್ತಿದೆ. ನಾವು